Regd No M 1299 Sri ಕಾ॥ 15—1—52

SATYAVADI = 35th Year

ಸತ್ಯವಾದಿ

ಸ್ಥಾಪಕರು- ಆರಮನೆ ಸಿರಸ್ತೆದಾರ್ ಎಂ. ಎ. ಸುಬ್ರಾಯರು [ಬಿಡಿ ಪ್ರತಿ 3 ಪೈ

27 ನೇ ತಾ. ತಿರುವಾಂಕೂರು ಕೊಚಿಯಲ್ಲಿ ವಿಮೋಚನಾ ದಿನ ಆ ಚ ರ ಣ

ಓಡ್ರಿನಾಥ ದೇವಾಲಯಕ್ಕೆ ಬೀಗಾದವರು ಹಕ್ಕು ನೀಡುವರೆಂದು ಪತ್ರಿಕೆಯಲ್ಲಿ ಪ್ರಕಟಿಸಿರುವ ವಿಷಯದಲ್ಲಿ ಅಷ್ಟು ಸತ್ಯಾಂಶವಿಲ್ಲವೆಂದು ಸರ್ ಬಿ ಎನ್ ರಾವ್ ಮದರಾಸಿನಲ್ಲಿ ತಿಳಿಸಿರುವರು

ಭಾರತ ಮತ್ತು ಅಮೇರಿಕ ಟೆಕ್ನಿಕಲ್ ಒಪ್ಪಂದಕ್ಕೆ 5 ನೇ ತಾ॥ ರಜು ಬಿತ್ತು

ಏಲೂರಿನ 10 ಕೂಪಾಯಿಗಳ ಜೋಟಾ ನೋಟುಗಳನ್ನು ಶಯಾರಿಸುತ್ತಿದ್ದ ಈರ್ವರಿಗೆ 4 ವರ್ಷಗಳ ಸಜಾ ವಿಧಿಸಲಾಯಿತು

ಸಿಕಂದರಾಬಾದಿನಲ್ಲಿ ಮೊನ್ನೆ ಒಂದು ಮನೆಯಲ್ಲಿ ತಾಯಿಮಕ್ಕಳು ನಿದ್ರಿಸುತ್ತಿದ್ದಾಗ ಹತ್ತಿಂವಿದ್ದ ದೀಪದಿಂದ ಕಿಡಿ ಹಾರಿ ಹತ್ತಿ ಹತ್ತಿಕೊಂಡು ಎಲ್ಲರೂ ಸಾವಿಗೀಡಾದರು

ಹೈದರಾಬಾದ್ ಶಾಸನ ಸಭೆ ಚುನಾವಣೆಯಲ್ಲಿ ಕಾಂಗ್ರೆಸಿನ ನಾಯಕರಾದ ಬಿಂದುಮಾಧವಂದ ಪರಾಜಯಗೊಳಿಸಲ್ಪಟ್ಟ ಪೀಪಲ್ ಡೆಮೊಕ್ರಾಟ್ ಫ್ರಂಟಿನ ಸ್ಥಾಪಿಸಿದ ಪುಂಡಲೀಕರಾಯರು ಕಾರ ಅಪಘಾತಕ್ಕೀಡಾಗಿ ಆಸ್ಪತ್ರೆಯಲ್ಲಿ ಸತ್ತರು

ಥೈಲಾಂಡಿನಿಂದ ಈ ವರ್ಷ 8 ಲಕ್ಷ ಟನ್ ಅಕ್ಕಿ ಮಾತ್ರ ಹೊರಕ್ಕೆ ರಫ್ತು ಮಾಡಲಾಗುವುದೂ, ಸಮರಭೀತಿಗಾಗಿ 3 ಲಕ್ಷ ಟನ್ ರಿಜರ್ವ್ ಮಾಡಿಟ್ಟಿರಲಾಗುವದೆಂದೂ ಬ್ಯಾಂಕಾಕಿನ ವಾರ್ತೆ

ಪಂಜಾಬಿನ ಕರ್ನಾಲ್ ಜಿಲ್ಲೆಯ ತಾನೇಸಾರ ಕ್ಷೇತ್ರದಲ್ಲಿರುವ ಚಾರಿತಾರ್ಹ ಕುರುಕ್ಷೇತ್ರ ನಗರವು 5 ಬ್ಯಾಲೆಟ ಪೆಟ್ಟಿಗೆಗಳನ್ನು ಖಾಲಿ ಕಳಿಸಿದೆಯೆಂದು ಅಂಬಾಲಾ ವಾರ್ತೆ ಅಲ್ಲಿ ಯಾರೂ ಮತದಾನ ಮಾಡಲಿಲ್ಲ

ಮೈಸೂರು ಸ್ಟೇಟ್ ಸಭೆಯ ಆರೋಗ್ಯ ಅಧಿಕಾರಿಗಳು ಪ್ರಕಟಣೆಯೊಂದನ್ನಿತ್ತು, ಕಳೆದ ತಿಂಗಳು 31 ನೇ ತಾರೀಖಿಗೆ ತೀರಿದ ಹದಿನೈದು ದಿವಸಗಳಲ್ಲಿ ಹದಿನಾಲ್ಕು ಡಿಫ್ತೀರಿಯ ಕೇಸುಗಳು ಆಗಿ ಒಂದು ಸಾವಾಯಿತೆಂದು ತಿಳಿಸುತ್ತಾರೆ

ವಾಷಿಂಗ್ಟನ್ನಿನಿಂದ ಬಂದ ವಾರ್ತೆ ಪ್ರಕಾರ ಅಮೇರಿಕ ವಿದೇಶ ಶಾಖೆ ಪ್ರಕಟಣೆಯೊಂದನ್ನಿತ್ತು, ಭಾರತದೊಡನೆ ಜಪಾನು ಪ್ರತ್ಯೇಕ ಒಪ್ಪಂದಕ್ಕೆ ಬರಲು ಸ್ವತಂತ್ರವಿದೆಯೆಂದು ತಿಳಿಸಿದೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶ್ರೀ ರಾಮಕೃಷ್ಣಯ್ಯನವರಿಗೂ (ಬಾಲರತ್ನಂ ತಾಯಿ) ಬಾಲರತ್ನಂರವರಿಗೂ ಮತ್ತು ಸಾವಿತ್ರಮ್ಮನವರಿಗೂ (ಬಾಲರತ್ನಂ ಪತ್ನಿ) ಸಾವಿತ್ರಮ್ಮನವರೊಡನೆ ರಾಮಕೃಷ್ಣಯ್ಯನವರ ಅಕ್ರಮ ಸಂಬಂಧದ ಬಗ್ಗೆ ಶೇಖರಿಸಿದ್ದ ಸಾಕ್ಷಿಗಳನ್ನು ವಿವರಿಸಿ ಹೇಳಿದ ದಾಗಿಯೂ, ಅದಕ್ಕೆ ಅವರುಗಳು ಏನೂ ಉತ್ತರಕೊಡಲಿಲ್ಲವೆಂದೂ ಬೆಂಗಳೂರಿನಲ್ಲಿ ನಡೆಯುತ್ತಿರುವ ಬಾಲರತ್ನಂ ಮೊಕದ್ದಮೆಯಲ್ಲಿ ತನಿಖಾಧಿಕಾರಿ ಶ್ರೀ ವೀರಣ್ಣನವರು ವಿಚಾರಣಾ ಕಾಲದಲ್ಲಿ ತಿಳಿಸಿದರು

ಕಾಶ್ಮೀರದ ಕಂದಾಯ ಮಂತ್ರಿ ಮಿರ್ಜಾ ಮಹಮದ್ ಅಫ್ ಸಾಲ್‌ಬೇಗರು ಮೊನ್ನೆ ಮದರಾಸಿನಲ್ಲಿ ಹೇಳಿಕೆಯಿತ್ತು, ಕಾಶ್ಮೀರದಿಂದ ಭಾರತ ಸೇನೆಗಳು ವಾಪಸಾಗುವದಿಲ್ಲವೆಂದೂ.

ಆದಿಕರ್ನಾಟದೊಡ್ಡ ರಾಮನಗರಂಕ್ಕೆ ಸೇರಿದ ಚುನಾವಣಾ ಕ್ಷೇತ್ರ ಮೊನ್ನೆ ನಡೆದ ಮಹಾ ಚುನಾವಣೆಯಲ್ಲಿ ಅಲ್ಲಿನ ಪ್ರತಿಯೋರ್ವರೂ ಓಟು ಮಾಡಿರುವರು.

ಬೊಂಬಾಯಿ ಸಚಿವ ಮುರಾರ್ಜಿ ಯವರಿಗೆ ಕಡಿಮೆ ಓಟುಗಳು !

ಇಂಡಿಯಾ ಭೂಮಿ ಮೇಲೆ ಪಾಕಿಸ್ತಾನದ ಧಾಳಿ

ಕಳೆದ ದನ ಕ್ವಿಲಾನಿನಲ್ಲಿ ಕೊಚ್ಚಿ ತಿರುವಾಂಕೂರು ಸಂಯುಕ್ತ ವಾಮ ಪಕ್ಷದ ಸಭೆ ಗೋಪಾಲಕೃಷ್ಣಮೆನನರ ಅಧ್ಯಕ್ಷತೆಯಲ್ಲಿ ಸೇರಿ ಕಾಂಗ್ರೆಸ್ಸೇತರ ಪಕ್ಷಗಳ, ಸ್ವತಂತ್ರರ ಸಹಕಾರದಿಂದ ಸಚಿವ ಮಂಡಲ ರಚಿಸುವ ಸೂಚನೆ ಮಾಡಿದೆ ಈ ಬಗೆಗೆ ಸಮಿತಿಯೊಂದು ರಚನೆಯಾಗಿದೆ ಶಾಸನ ಸಭೆಗೆ ಆಯ್ಕೆಯಾಗಿರುವವರ ಮೇಲಿನ ನಿರ್ಬಂಧ ತೆಗೆಯಲು ಸರ್ಕಾರವನ್ನು ಕೋರುವ ನಿರ್ಣಯ ಮಾಡಿದೆ ಬಂಧನದಲ್ಲಿರುವ ಬಿಡುಗಡೆ, ನಿರ್ಬಂಧಾಜ್ಞೆಗಳನ್ನು ರದ್ದು ಪಡಿಸಬೇಕೆಂದು 27 ನೇ ತಾ॥ ವಿಮೋಚನ ದಿನ ಆಚರಿಸಲು, ಮೆರವಣಿಗೆ, ಸಭೆ ನಿರ್ಣಯಗಳನ್ನು ಮಾಡಲು ಸೂಚಿಸಿದೆ

ಎರಡು ದಿವಸಗಳ ಹಿಂದೆ ಕೂಚ್ ಬಿಹಾರ್ ಜಿಲ್ಲೆಯ ಮೆಕನಿಗಂಜ ಸಬ್ಡಿವಿಜನ್‌ದ ಬಾಗ್ಡೋಕ ಸನಿಹದ ಗಡಿಯಲ್ಲಿ 5 ನೂರು ಪಾಕಿಸ್ತಾನದವರು ಪೋಲೀಸ್ ಇನ್‌ಸ್ಪೆಕ್ಟರವರ ನಾಯಕತ್ವದಲ್ಲಿ ಬಂದು ಈರ್ವರನ್ನು ಅಪಹರಿಸಿದ್ದಾರೆ ಹತ್ತು ದನಗಳನ್ನು ವಧಿಸಿದ್ದಾರೆ

ಅಲಹಾಬಾದಿನಿಂದ ಬಂದ ವಾರ್ತೆಯೊಂದು ಹೀಗೆ ತಿಳಿಸಿತ್ತು — ಕುಂಭಮೇಳಕ್ಕೆಂದು ತಿರುವಾಂಕೂರ - ಕೊಚ್ಚಿ ಕಡೆಯಿಂದ ಬಂದಿದ್ದ ಯಾತ್ರಾರ್ಥಿಗಳ ಪೈಕಿ ಚಳಿ ತಡೆಯಲಾರದೆ ಕಲ್ಲು ಜ್ವಲಿಸಿ ಬೆಂಕಿ ಉರಿಹಾಕಿ 13 ಮಂದಿ ಮಲಗಿದರು ಬೆಳಿಗ್ಗೆ ಎಚ್ಚರಿತ್ತಾದೂ ಏಳದಿರಲು ಬಾಗಿಲು ಒಡೆದ ನೋಡಲು 9 ಮಂದಿ ಸತ್ತಿದ್ದರು. ಜ್ಞಾನವಿಲ್ಲದೆ ಬಿದ್ದಿದ್ದ 4 ಮಂದಿ ಆಸ್ಪತ್ರೆಯಲ್ಲಿ ಗುಣವಾಗುತ್ತಿರುವರು

ನಿನ್ನೆ ದೆಹಲಿಯಲ್ಲಿ ಶೇ 45 ಮಂದಿ ಓಟು ಮಾಡಿದ್ದಾರೆ.

ಸೂರತ್ ಜಿಲ್ಲೆಯ ಬುಲ್ಸಾರ್ ಚಿಕ್ಕದ್ವಿಸದಸ್ಯ ಕ್ಷೇತ್ರದಿಂದ ನಡೆದ ಚುನಾವಣೆ ಎಣಿಕೆ ನಾಳೆ ಪ್ರಾರಂಭ ಇಲ್ಲಿನ ಉನೇದುವಾರ ಬೊಂಬಾಯಿ ಗೃಹ ಸಚಿವ ಮುರಾರ್ಜಿ ದೇಸಾಯರಿಗೆ ಕಡಿಮೆ ಮತ ಬಿದ್ದಿರುವ ಸುದ್ದಿ ಇದೆ ಆ ಪ್ರಕಾರ ಮುರಾರ್ಜಿಯವರಿಗೆ 30977 ಮತ ಗಳೂ ಅವರ ಪ್ರತಿಸ್ಪರ್ಧಿ ಸಮಾಜವಾದಿ ಡಾ॥ ದೇಸಾಯರಿಗೆ 30972 ಓಟುಗಳ್ಳ ಬಿದ್ದಿವೆ.

— ಕೊಚ್ಚಿಕ್ ಕಾಂಗ್ರೆಸ್ ಸಮಿತಿ ಕಳೆದ ದಿನ ಸಭೆ ಸೇರಿ ಆ ಪ್ರಾಂತಕ್ಕೆ ಆಡಳಿತ ಅಧಿಕಾರಿಯನ್ನು ನೇಮಿಸುವ ಕುರಿತು ಚರ್ಚಿಸಿತು.

ಬೊಪಾಯಿ ವಿನಮುಯದ ಮೇಲೆ ರಕ್ಷಣ ಭಾತಕ್ಕೆ ಯಂತ್ರಗಳನ್ನು ಕೊಡಲು ಸಿದ್ಧವಿದೆಯೆಂದು ಬೊಂಬಾಯಿನಲ್ಲಿ ರಷ್ಯ ರಾಯಭಾರಿ ತಿಳಿಸಿದ್ದಾರೆ.

ಕಲ್ಕತ್ತಾ ಜೂಜಿನಲ್ಲಿ ವಿಜಯದ ಫಿಡ್ಲರ್ ಕಡೆರೆ ರೂ. 1 ಲಕ್ಷಕ್ಕೆ ಮಾರಾಟವಾಯಿತೆಂದು ಕೊಲಂಬೊ ವಾರ್ತೆ

ಪಕ್ಷಗಳ ಬಲ

ನಿನ್ನೆ ಮಧ್ಯಂತರ ತನಕ ಭಾರತದ ನಾನಾ ಪ್ರಾಂತಗಳಲ್ಲಿ ಕಾಂಗ್ರೆಸ್ ಮತ್ತು ವಿರೋಧಿಗಳ ಬಲ —

ಬೊಂಬಾಯಿಸಲ್ಲಿ ಕಾಂಗ್ರೆಸ್ 84 ವಿರೋಧಿಗಳು 14

ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ 103 ವಿರೋಧಿಗಳು 19

ಮದರಾಸಿನಲ್ಲಿ ಕಾಂಗ್ರೆಸ್ 50, ವಿರೋಧಿಗಳು 78.

ಹೈದರಾಬಾದಿನಲ್ಲಿ ಕಾಂಗ್ರೆಸ್ 54 ವಿರೋಧಿಗಳು 52

ತಿರುವಾಂಕೂರು-ಕೊಚ್ಚಿನಲ್ಲಿ ಕಾಂಗ್ರೆಸ್ 41, ವಿರೋಧಿಗಳು 64.

ಉಡ್‌ಲಾಂಡ್ಸ್ ಜನಭರಿತ 2 ನೇ ವಾರ

RAJPUT ರಜ್‌ಪುತ್

ದೈರಾಜ್, ಸುರೈಯ, ನಪ್ರು, ಕುಲ್ದೀಪ್ ಅಭಿನಯಿಸಿರುವ

ಚಿತ್ರಾಕರ್ಷಕ ಹಿಂದಿ ಚಿತ್ರ, ಪ್ರತಿದಿನ 3 ಪ್ರದರ್ಶನಗಳು

Edited, Printed and Publishedby Dharma Prachara Nirata M. S. Krishna Rao. at the Satyavadi Press Chamrajpuram Mysore

ಉತ್ಸವ ಕಾರ್ಯಕ್ರಮ

ಮೈಸೂರು ರಾಜಧಾನೀ ಶ್ರೀ ಶ್ರೀ ಜಗದ್ಗುರು ನಾಗಲಿಂಗಸ್ವಾಮಿ ಗಳವರ ಸಂಸ್ಥಾನದಲ್ಲಿ ಈ ಸಿಂಗಳು 9 ನೇ ತಾರೀಖಿನಿಂದ 14 ನೇ ತಾರೀಖಿನ ವರಿಗೆ ಶ್ರೀ ಸದ್ಗುರ್ವಾರಾಧನ ಮಹೋತ್ಸವ. ಶಿವಯೋಗಾಚಾರ್ಯ ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಯವರ ಸನ್ನಿಧಾನದಲ್ಲಿ ಅತ್ಯಂತ ವೈಭವದಿಂದ ಯಶಸ್ವಿಯಾಗಿ ನೆರವೇರಿತು.

9 ನೇ ತಾ| ನಿಂದ 12 ನೇ ತಾ| ವರಿಗೆ ಪ್ರತಿನಿತ್ಯ ಪ್ರಾತಃಕಾಲ ಶ್ರೀ ನಾಗಲಿಂಗೇಶ್ವರಸ್ವಾಮಿಗೆ ವೇದೋಕ್ತ ಮಹಾನ್ಯಾಸಪೂರ್ವಕ ಅಭಿಷೇಕ ಷೋಡಷೋಪಚಾರ ಸಹಸ್ರನಾಮ ಪೂಜೆಗಳೂ ಶಿವಗೀತಾ ಮುಂತಾದುವುಗಳ ಪಾರಾಯಣಗಳೂ, ಸಾಯಂಕಾಲ ಮಹಾ ಪಂಚಾಕ್ಷರ ಜಪವೂ, ಭಜನೆಯೂ ಜರುಗಿದುವು 13 ನೇ ತಾ|| ಬೆಳಿಗ್ಗೆ ಶ್ರೀ ಶ್ರೀ ನೂತನ ಪಟ್ಟದ ಸಚ್ಚಿದಾನಂದ ಮಹಾದೇವ ಸ್ವಾಮಿಗಳವರು ಶ್ರೀ ಗದ್ದುಗೆಪೂಜೆ ನೆರವೇರಿಸಿದರು ಮಧ್ಯಾಹ್ನ 12 ಗಂಟೆಗೆ ಸಂತರ್ಪಣೆ- 4 ಗಂಟೆಗೆ ರಥದಲ್ಲಿ ಶ್ರೀ ಗುರುಸ್ವಾಮಿಗಳವರು ಮೇನಾದಲ್ಲಿ ಶ್ರೀ ಶ್ರೀ ಸಚ್ಚಿದಾನಂದ ಮಹಾದೇವಸ್ವಾಮಿಗಳವರ ಉತ್ಸವವು ಸಕಲ ಬಿರುದುಗಳೊಡನೆ ಜಾಜಾಜಿಜಂ ತ್ರಿಭಜನೆಗಳ ಸಹಿತ ರಾಜಬೀದಿಗಳಲ್ಲಿ ವಿಜೃಂಭಣೆಯಿಂದ ನೆರವೇರಿತು 14 ನೆ ತಾ|| ಬೆಳಿಗ್ಗೆ 10 ಗಂಟೆಗೆ ಶ್ರೀ ಶ್ರೀ ಗಳವರ ಪಧ್ಯುಕ್ತವಾದ ಪಾದಪೂಜೆಯು ಮಾ 11 ಗಂಟೆಗೆ ಸದ್ಗುರು ಮಹಿಮಾ ವಿಷಯವಾಗಿ ಉಪನ್ಯಾಸಗಳೂ, ಮಧ್ಯಾಹ್ನ ಮಹಾ ಸಂತರ್ಪಣೆ, ಸಾಯಂಕಾಲ ಮಹಾಪಂಚಾಕ್ಷರಿ ಭಜನೆಯೊಡನೆ ಮಂಗಳವಾಗಿ ಮಹೋತ್ಸವ ಸಮಾಪ್ತವಾಯಿತು

ಅಮಿತೋತ್ಸಾಹ

ಈ ಮಹೋತ್ಸವದ ಕಾರ್ಯಕ್ರಮಗಳೆಲ್ಲಾ ದೊಡ್ಡ ಸ್ವಾಮಿಗಳವರಾದ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳವರ ಘನ ಸನ್ನಿಧಾನದಲ್ಲಿ ಜರುಗಿದುವು. ಶ್ರೀ ಶ್ರೀ ಗಳವರು ಕೆಲಕಾಲದಿಂದ ತುಂಬಾ ಅಸ್ವಸ್ಥತೆಯಿಂದಿದ್ದು, ಪರಶಿವನ ಮಹಾ ಕೃಪೆಯಿಂದ ದಿನೇ ದಿನೇ ಗುಣ ಹೊಂದಿ, ಈ ಉತ್ಸವದ ಸಮಸ್ತ ಕಾರ್ಯಗಳಿಗೂ ನೇತೃಗಳಾಗಿದ್ದುದನ್ನು ಕಂಡು ಆಹ್ವಾನಿತರೂ, ಭಕ್ತಾದಿಗಳು ಸರ್ವರಿಗೂ ಅನಂದೋತ್ಸಾಹಗಳುಂಟಾದುದು ಸಹಜ

ಶ್ರೀ ಶ್ರೀ ನಾಗಲಿಂಗಸ್ವಾಮಿಗಳವರ ಮಠದಲ್ಲಿ

ಶ್ರೀ ಸದ್ಗುರ್ವಾರಾಧನ ಮಹೋತ್ಸವ

ಶ್ರೀ ಶ್ರೀ ನಾಗಲಿಂಗಸ್ವಾಮಿಗಳವರ ಮಠದ ದೊಡ್ಡ ಸ್ವಾಮಿಗಳವರು
ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳವರು

ಅಪೆರಾ— ಅಮೋಘ ನೇ ವಾರ

ಜೂಪಿಟರ್ ವರ

ಖೈದಿ Khaithi

(ಅತ್ಯನೋಘ ತಮಿಳು ಚಿತ್ರ)

ಭೂಮಿಕೆಯಲ್ಲಿ— ನಟರಾಜನ್, ಮಾಲತಿ, ರೇವತಿ, ಬಾಲಚಂದರ್

ರಣಜಿತ್ 11—1—52 ರಿಂದ

ಸನಮ್ (ಹಿಂದಿ) SANAM

ಸುರಯ್ಯ, ದೇವಾನಂದ್, ಗೋಪ್, ಸಿಂಗ್, ಮಿನಾಕುಮಾರಿ ನಟಿಸಿರುವರು

ಪ್ರತಿದಿನ 3 ಆಟಗಳು

ಪರಶಿವನ ಕೃಪೆಯಿಂದ ಶ್ರೀ ಶ್ರೀ ಗಳು ಸಂಪೂರ್ಣ ಗುಣವಾಗಿ, ಶ್ರೀ ಮಠದ ಮಾರ್ಗದರ್ಶಕರಾಗಿ ಬಹುಕಾಲ ನಿಲ್ಲಲೆಂದು ಕೋರುತ್ತೇವೆ.

ಶ್ರೀ ಸದ್ಗುರುವಿನ ಕೃಪೆಗೆ ಪಾತ್ರರಾಗಲು ಗಣ್ಯ ಆಹ್ವಾನಿತರಾದಿಯಾಗಿ ಶ್ರೀಮಠದ ಭಕ್ತರು, ಶಿಷ್ಯರು ಉತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಶ್ರೀ ಗುರುಸ್ವಾಮಿ, ದೊಡ್ಡ ಮತ್ತು ನೂತನ ಶ್ರೀ ಶ್ರೀ ಗಳವರ ದರ್ಶನದಿಂದ ಭಕ್ತಾದಿಗಳು ಸಂತೋಷಭರಿತರಾಗಿ ಭಕ್ತಿಪರವಶರಾದರು.

ಸತ್ಯವಾದಿಗೆ

ಶಿಲ್ಪಕಲಾವರಪ್ರಸಾದವೇ ಜೀವನದ ಸರ್ವಸ್ವವಾದ ಶ್ರೀ ಶ್ರೀ ಗಳವರು ನನಗೆ ಬಹುಕಾಲದಿಂದಲೂ ಸುಪರಿಚಿತರು, ಮತ್ತು ಪ್ರೋತ್ಸಾಹಕರು. ಈ ಸುಯೋಗದ ಮಹಾಭಾಗ್ಯವೆಂಬಂತೆ, ನಮ್ಮ ಪತ್ರಿಕಾ ಸಂಸ್ಥಾಪಕರ ನಾಮಾಂಕಿತದಲ್ಲಿ ನಿರ್ಮಾಣವಾಗಿರುವ 'ಶ್ರೀ ಸರಸ್ವತೀ ಮಂದಿರ' ಕ್ಕೆ ಶ್ರೀ ಶ್ರೀ ಗಳವರು ಅಮೃತಶಿಲೆಯಿಂದ ಕಡೆದ ವಿದ್ಯಾದೇವಿ ಶ್ರೀ ಸರಸ್ವತಿಯ ಸುಂದರ ವಿಗ್ರಹವನ್ನು ಕೊಡುವ ಕೃಪೆ ಮಾಡಿದ್ದಾರೆ. ಶ್ರೀ ಶ್ರೀ ಗಳವರ ಈ ಸ್ವಾಮ್ಯ ಉದಾರತೆಗೆ ನಾವು ಚಿರಋಣಿಗಳು ಮತ್ತು ಕೃತಜ್ಞರು.

ವ್ಯವಸ್ಥೆ

ಈ ಉತ್ಸವದ ವ್ಯವಸ್ಥೆಯನ್ನೆಲ್ಲಾ ಸುಸೂತ್ರವೂ, ಯಶಸ್ವೀರೀತಿಯಾಗಲು ಸಮರ್ಪಕವಾಗಿ ಏರ್ಪಾಟು ಮಾಡಿದ್ದ ಶ್ರೀ ಶ್ರೀ ಮಠೀಯ ಸರ್ವಾಧಿಕಾರೀ ಶ್ರೀ ನಾಗೇಂದ್ರಸ್ಥಪತಿಯವರು, ಕಾರ್ಯದರ್ಶಿ ಶ್ರೀ ನಾಗಲಿಂಗ ಸ್ವಾಮಿಗಳು ಅಭಿನಂದನಾರ್ಹರು

ಹರಿಕತೆ ಮತ್ತು ಪುರಾಣ ಶ್ರವಣಗಳಿಂದ ಈತೀಬಾಧೆ ಮುಂತಾದುವು ಬರುವುದೇ ಇಲ್ಲ. ಆದುದರಿಂದ ಇಂಥಹ ಪುಣ್ಯ ಕೆಲಸಗಳನ್ನು ಜನ ಹೆಚ್ಚುಹೆಚ್ಚಾಗಿ ಪ್ರೋತ್ಸಾಹಿಸಬೇಕು — ಎಂದು ಮೈಸೂರು ಪೌರಸಭೆಯ ಸದಸ್ಯರಾದ ಡಾ|| ಬಿ. ಜಿ. ದಾಸ್‌ರವರು ಮೊನ್ನೆ ಮೊನ್ನೆ ಅಸೇಸಾರೋಟು ಬೀದಿಯಲ್ಲಿನ ಹಕ್ಕೂ ಜನರಂಜನಾ ಮಂದಿರದಲ್ಲಿ ಶ್ರೀ ಸೇತೂಮಾಧವದಾಸರಿಂದ ಗರುಡ ಗರ್ವಭಂಗ ಎಂಬ ಹರಿಕತೆ ನಡೆದ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸಿ ತಿಳಿಸಿದರು.